॥ ಶ್ರೀ ಹಾಸನಾಂಬದೇವಿಯೇ ನಮಃ ॥

**ಕರ್ನಾಟಕ ರಾಜ್ಯ - ಹಾಸನ ಜಿಲ್ಲೆ - ಹಾಸನದಲ್ಲಿ ನೆಲೆಸಿರುವ**

# ಶ್ರೀ ಹಾಸನಾಂಬ ದೇವಿ ದರ್ಶನಾರಂಭ

# ಆಹ್ವಾನ ಪತ್ರಿಕಾ

## ದಿನಾಂಕ 20-10-2011 ರಿಂದ 28-10-2011

**(ದರ್ಶನದ ಸಮಯ ಬೆಳಿಗ್ಗೆ 6-00 ರಿಂದ 1-30 ಮತ್ತು ಮಧ್ಯಾಹ್ನ 3-00 ರಿಂದ ರಾತ್ರಿ 10-30 ರವರೆಗೆ)**

20-10-2011ರಂದು ಮಧ್ಯಾಹ್ನ 12-30ಕ್ಕೆ ದೇವಾಲಯದ ಬಾಗಿಲು ತೆರೆದು ವಿಶ್ವ ರೂಪ ದರ್ಶನಕ್ಕೆ ಅವಕಾಶವಿರುತ್ತದೆ. ಪೂಜೆ ಇರುವುದಿಲ್ಲ



## ವಿಶೇಷ ಪೂಜಾ ಕಾರ್ಯಕ್ರಮಗಳು ಹಾಗೂ ದರ್ಶನದ ಸಮಯ :

| | | |
|---|---|---|
| 21-10-2011ನೇ ಶುಕ್ರವಾರ | : | ಬೆಳಿಗ್ಗೆ 6-00 ರಿಂದ ಸಂಜೆ 4-30 ಗಂಟೆ ಹಾಗೂ ರಾತ್ರಿ 9-30 ರಿಂದ ಕಡೆಯ ದರ್ಶನಾರ್ಥಿಗಳ ವರೆವಿಗೂ |
| 24-10-2011ನೇ ಸೋಮವಾರ | : | ಶ್ರೀ ಸಿದ್ದೇಶ್ವರಸ್ವಾಮಿ ತೆಪ್ಪೋತ್ಸವ, ದೇವಿಕೆರೆಯಲ್ಲಿ ಮಧ್ಯಾಹ್ನ 12-00 ಗಂಟೆಗೆ |
| 25-10-2011ನೇ ಮಂಗಳವಾರ | : | ಶ್ರೀ ಬಸವೇಶ್ವರಸ್ವಾಮಿ ಉತ್ಸವ, ಸಂಜೆ 6-00 ಕ್ಕೆ |
| 26-10-2011ನೇ ಬುಧವಾರ | : | ಕೈಲಾಸೋತ್ಸವ (ರಾವಣೋತ್ಸವ) ಸಂಜೆ 6-00ಕ್ಕೆ |
| 27-10-2011ನೇ ಗುರುವಾರ | : | "ಶ್ರೀ ಸಿದ್ದೇಶ್ವರ ಸ್ವಾಮಿಯವರ ರಥೋತ್ಸವ" ರಾತ್ರಿ 10-00ಕ್ಕೆ ಬೆಳಿಗ್ಗೆ 6-00 ರಿಂದ ಸಂಜೆ 4-30 ಗಂಟೆಯವರೆಗೆ ಹಾಗೂ ರಾತ್ರಿ 9-30 ರಿಂದ ಮರುದಿನ ಬೆಳಿಗ್ಗೆ 8-00ರ ವರೆಗೆ ಮಾತ್ರ ಪೂಜೆ ಮತ್ತು ದರ್ಶನವಿರುತ್ತದೆ. |
| 28-10-2011ನೇ ಶುಕ್ರವಾರ | : | ಬೆಳಿಗ್ಗೆ 5-30 ಕ್ಕೆ ಶ್ರೀ ಸಿದ್ದೇಶ್ವರಸ್ವಾಮಿ ಕೆಂಡೋತ್ಸವ ವಿಶ್ವರೂಪ ದರ್ಶನ ಮಧ್ಯಾಹ್ನ 12-30 ರಿಂದ 1-30ರ ವರೆಗೆ ಹಾಗೂ ಈ ವರ್ಷದ ದರ್ಶನದ ಮುಕ್ತಾಯ (ದೇವಾಲಯದ ಬಾಗಿಲು ಹಾಕುವುದು) |

ದಿನಾಂಕ 22-10-2011 ರಿಂದ ದಿನಾಂಕ 26-10-2011, ಬೆಳಿಗ್ಗೆ 6-00 ಗಂಟೆಯಿಂದ ಮಧ್ಯಾಹ್ನ 1 ಗಂಟೆ ಮತ್ತು ಮಧ್ಯಾಹ್ನ 3-00 ರಿಂದ ರಾತ್ರಿ 10-30ರವರೆಗೆ ಪೂಜೆ ಮತ್ತು ದರ್ಶನಕ್ಕೆ ಅವಕಾಶವಿರುತ್ತದೆ.

## ಹಾಸನಾಂಬೆಯ ದೇವಾಲಯ

ಜನನಿ ಜನ್ಮ ಭೂಮಿಶ್ಚಸ್ವರ್ಗಾದಃ ಗರೀಯಃ - ಈ ಶುಭಾಷಿತ ನಿತ್ಯ ಸತ್ಯ. ಸಮಸ್ತ ದೇವಾನುದೇವತೆಗಳಿಂದಲೂ ಮಾತೃದೇವತೆಗಳಿಂದಲೂ ಮಾತೃದೇವತೆಗೆ ಸರ್ವೋತ್ಕೃಷ್ಟಗಳಲ್ಲಿಯೇ ಸರ್ವೋತ್ಕೃಷ್ಟವಾದ ಸ್ಥಾನಮಾನ ಈ ಭರತವರ್ಷದ ವಸುಧೆಯಲ್ಲಿ ಜನಿಸಿ ಉಸಿರಾಡುತ್ತಿರುವ ನಾವು ಧನ್ಯರು.

ನಮ್ಮ ಈ ಸುಂದರ ಕರ್ನಾಟಕವು ದೇಶ ವಿದೇಶಗಳಲ್ಲಿ ಪ್ರಸಿದ್ಧಿ ಹೊಂದಿದ ಈ ಸಮಯದಲ್ಲೂ ಬೀಡುಬಿಟ್ಟಿರುವ ಸುಂದರ ಕೆತ್ತನೆಗಳು ಪ್ರವಾಸಿಗರನ್ನು ಆಕರ್ಷಿಸುತ್ತೇವೆ. ಈ ದೇವಾಲಯಗಳ ಕೇಂದ್ರ ಬಿಂದುವಾದ ಹಾಸನದಲ್ಲಿ ನೆಲೆಸಿರುವ ಹಾಸನಾಂಬೆಯ ದೇವಾಲಯವನ್ನು ನೋಡಿ ದರ್ಶನ ಮಾಡಿ ದೇವಿಯ ಕೃಪೆಗೆ ಪಾತ್ರರಾಗಬೇಕಾದ್ದು ಪ್ರತಿಯೊಬ್ಬರ ಧರ್ಮ.

ಸುಮಾರು 12ನೇ ಶತಮಾನದಲ್ಲಿ ಕೃಷ್ಣಪ್ಪನಾಯಕ ಪಾಳೇಗಾರನ ಕಾಲದಲ್ಲಿ ಸ್ಥಾಪಿತವಾಗಿರುವ ಈ ದೇವಾಲಯವು ಇತರ ದೇವಾನುದೇವತೆಗಳ ಕೆತ್ತನೆಯಲ್ಲಿ ಹಾಸನಾಂಬೆಯ ದೇವಿಯು ಹುತ್ತದಲ್ಲಿ ನೆಲೆಸಿರುವ ನೋಟವನ್ನು ಇಲ್ಲಿ ಕಾಣಬಹುದು.

### ಸ್ಥಳ ಪುರಾಣ

ಸಪ್ತ ಮಾತೃಕೆಯರು ವಾರಾಣಾಸಿಯಿಂದ (ಕಾಶಿ) ದಕ್ಷಿಣದ ವಾಯುವಿಹಾರಾರ್ಥವಾಗಿ ಬಂದರೆಂದೂ, ಆ ಸಪ್ತ ಮಾತೃಕೆಯರೆಂದರೆ, ಬ್ರಾಹ್ಮೀದೇವಿ, ಮಾಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ ಮತ್ತು ಚಾಮುಂಡಿ. ಈ ಸಪ್ತ ಮಾತೃಕೆಯರಲ್ಲಿ ವೈಷ್ಣವಿ, ಕೌಮಾರಿ, ಮಹೇಶ್ವರಿ ದೇವಿಯರು ಈ ದೇವಾಲಯದಲ್ಲಿ ಹುತ್ತದ ರೂಪದಲ್ಲಿ ನೆಲೆಸಿದರೆಂದೂ, ಬ್ರಾಹ್ಮೀದೇವಿಯು ಕೆಂಚಮ್ಮನ ಹೊಸಕೋಟೆಯಲ್ಲಿ ನೆಲೆಸಿದರೆಂದೂ, ಚಾಮುಂಡಿ, ವಾರಾಹಿ, ಇಂದ್ರಾಣಿಯರು ನಗರದ ಮಧ್ಯಭಾಗದಲ್ಲಿರುವ ದೇವಿಗೆರೆಯಲ್ಲಿ ನೆಲೆಸಿರುವರೆಂದೂ ಹಿರಿಯರಿಂದ ತಿಳಿದು ಬಂದಿದೆ.

### ವರ್ಷಕ್ಕೊಮ್ಮೆ ದೇವಿಯರ ದರ್ಶನ

ಹಾಸನಾಂಬ ದೇವಿಯನ್ನು ಭಕ್ತರು ಎಲ್ಲಾ ಸಮಯದಲ್ಲೂ ದರ್ಶನ ಮಾಡಲು ಸಾಧ್ಯವಿಲ್ಲ. ವರ್ಷಕ್ಕೊಂದು ಸಾರಿ ಆಶ್ವೀಜ ಮಾಸ ಪೂರ್ಣಿಮೆ ನಂತರ ಬರುವ ಗುರುವಾರದಂದು ಬಾಗಿಲು ತೆರೆದರೆ ಅನಂತರ ಬಲಿಪಾಡ್ಯಮಿ ಮಾರನೇ ದಿನ ಬಾಗಿಲು ಮುಚ್ಚುವುದು. ಪುನಃ ಒಂದು ವರ್ಷದ ಕಾಲ ದೇವಿಯರ ದರ್ಶನ ಸಿಗುವುದಿಲ್ಲ. ಬಾಗಿಲು ಮುಚ್ಚುವ ದಿವಸ ಹಚ್ಚಿದ ದೀಪವು ಮುಂದಿನ ವರ್ಷ ಬಾಗಿಲು ತೆರೆಯುವ ತನಕ ಒಂದು ವರ್ಷಗಳ ಕಾಲ ದೇವಿಯ ಗರ್ಭಗುಡಿಯಲ್ಲಿ ದೀಪ ಉರಿಯುವುದು ದೇವಿಯವರ ವಿಶೇಷ ಮಹಿಮೆ ಈ ದೇವಾಲಯದಲ್ಲಿರುವ ಪ್ರತೀತಿ.

ಹಾಸನಾಂಬ ದೇವಿಯ ಬಾಗಿಲು ತೆಗೆಯುವ ಸಮಯ ಬಂದಿತೆಂದರೆ ಜಿಲ್ಲೆಯ ಎಲ್ಲಾ ಮೂಲೆ ಮೂಲೆಗಳಿಂದಲೂ ಭಕ್ತಾದಿಗಳು ದೇವಿಯ ದರ್ಶನಕ್ಕೋಸ್ಕರ ಸಾಲು-ಸಾಲಾಗಿ ನಿಂತು ದರ್ಶನ ಮಾಡುವ ನೋಟವು ಜಾತ್ರೆಯಂತೆ ಕಾಣುತ್ತದೆ. ಬಾಗಿಲು ತೆಗೆಯುವ ದಿವಸ ಹಾಸನದಲ್ಲಿರುವ ಎಲ್ಲಾ ತಳವಾರ ಮನೆತನದವರು ದೇವಿಯ ಗರ್ಭಗುಡಿಯ ಎದುರಿಗೆ ಬಾಳೆಕಂದನ್ನು ನೆಟ್ಟು ಹಾಸನಾಂಬೆಯನ್ನು ಭಕ್ತಿಯಿಂದ ಭಜಿಸುತ್ತಾ ಬಾಳೆಕಂದನ್ನು ಕತ್ತರಿಸಿದ ನಂತರವೇ ದೇವಿಯ ಬಾಗಿಲನ್ನು ತೆಗೆಯುವ ಪ್ರತೀತಿ ಮೊದಲಿನಿಂದಲೂ ರೂಢಿಯಲ್ಲಿದೆ. ಈ ದೃಶ್ಯವನ್ನು ನೋಡಲು ಸಾವಿರಾರು ಭಕ್ತಾದಿಗಳು ಕಾದು ಕುಳಿಸಿರುತ್ತಾರೆ.

ಮೊದಲು ಈ ಊರಿಗೆ ಸಿಂಹಾಸನಪುರಿ ಎಂದು ಹೆಸರಿದ್ದು ಹಾಸನಾಂಬ ದೇವಿಯು ನೆಲೆಸಿದ ನಂತರ ಹಾಸನ ಎಂದು ಹೆಸರು ಬಂದಿತೆಂದು ತಿಳಿದುಬರುತ್ತದೆ.

### ಅತ್ತೆಮನೆ ಸೊಸೆ

ಪ್ರತಿನಿತ್ಯ ದೇವಿಯ ದರ್ಶನ ಮಾಡಲು ಬರುತ್ತಿದ್ದ ಸೊಸೆಗೆ ಕಿರುಕುಳ ಕೊಡುತ್ತಿದ್ದ ಅತ್ತೆಯು ಒಂದು ದಿನ ಸೊಸೆಯನ್ನು ಹಿಂಬಾಲಿಸಿದಾಗ ಮನೆಯಿಂದ ನೇರವಾಗಿ ಬಂದು ದೇವಿಯ ಮುಂದೆ ನಿಂತು ದೇವಿಯ ಧ್ಯಾನದಲ್ಲಿ ಮಗ್ನಳಾಗಿದ್ದ ಸೊಸೆಯನ್ನು ಕಂಡು ಸಿಟ್ಟಿನಿಂದ ಅತ್ತೆಯು ಮನೆಯ ಕೆಲಸ ಕಾರ್ಯಗಳಿಗಿಂತ ದೇವಿಯ ದರ್ಶನ ನಿನಗೆ ಹೆಚ್ಚಾಯಿತೇ ಎಂದು ದೇವಿಯ ಮುಂಭಾಗದಲ್ಲಿದ್ದ ಚಂದ್ರನ ಬಟ್ಟಲನ್ನು ತೆಗೆದುಕೊಂಡು ತಲೆಯ ಮೇಲೆ ಕುಕ್ಕಿದ್ದರಿಂದ ನೋವನ್ನು ತಾಳಲಾರದೇ ಸೊಸೆಯು ಅಮ್ಮಾ ಹಾಸನಾಂಬೆ ಎಂದು ಭಕ್ತಿಯಿಂದ ಕೂಗಿದಾಗ, ಭಕ್ತಳ ಕಷ್ಟವನ್ನು ನೋಡಲಾರದೆ ದೇವಿಯು ಅವಳ ಭಕ್ತಿಗೆ ಮೆಚ್ಚಿ ತನ್ನ ಸನ್ನಿಧಿಯಲ್ಲಿ ಯಾವಾಗಲೂ ಎದುರಿಗೆ ಕಾಣುವಂತಿರು ಎಂದು ಹರಸಿದ್ದರಿಂದ ಸೊಸೆಯು ಕಲ್ಲಾಗಿ ನೆಲೆಸಿದಳೆಂದೂ ಪ್ರತೀ ವರ್ಷವೂ ಒಂದು ಭತ್ತದ ಕಾಳಿನ ತುದಿಯಷ್ಟು ದೇವಿಯ ಕಡೆ ಚಲಿಸುವಳೆಂದೂ, ಪಾದತಲುಪಿದ ಕ್ಷಣದಲ್ಲೇ ಕಲಿಯುಗದ ಅಂತ್ಯ ಎನ್ನುವ ವಾಡಿಕೆ ಮೊದಲಿನಿಂದಲೂ ಸಹ ಬಂದಿದೆ. ಅತ್ತೆಮನೆ ಸೊಸೆ ಕಲ್ಲಾಗಿ ನೆಲೆಸಿರುವ ಈ ದೃಶ್ಯವನ್ನು ಈಗಲೂ ಸಹ ವರ್ಷಕ್ಕೊಮ್ಮೆ ಕಣ್ಣಾರೆ ಕಾಣಬಹುದು.

### ಕಳ್ಳಪ್ಪಗುಡಿ

ದೇವಿಯ ಮೇಲಿರುವ ಆಭರಣಗಳನ್ನು ಅಪಹರಿಸಲೆಂದು ನಾಲ್ಕು ಮಂದಿ ಕಳ್ಳರು ಒಳಪ್ರವೇಶಿಸಿ, ಆಭರಣಗಳನ್ನು ತೆಗೆಯಲು ಹೋದಾಗ ಕುಪಿತಳಾದ ದೇವಿಯು ಶಾಪಕೊಟ್ಟಾಗ ಆ ನಾಲ್ಕು ಮಂದಿ ಕಳ್ಳರು ಕಲ್ಲಾಗಿದ್ದು, ಇಂದಿಗೂ ಇವುಗಳನ್ನು ಕಾಣಬಹುದು. ಈ ಗುಡಿಯನ್ನು ಕಾಳ್ಳಪ್ಪನ ಗುಡಿ ಎಂದು ಕರೆಯುತ್ತಾರೆ.

## ಸಿದ್ಧೇಶ್ವರ ದೇವಾಲಯ

ಹಾಸನಾಂಬೆಯ ದೇವಾಲಯದ ದ್ವಾರದಿಂದ ಒಳಪ್ರವೇಶಿಸಿದ ತಕ್ಷಣ ಮೊದಲು ನೋಡಬಹುದಾದ ಸಿದ್ಧೇಶ್ವರ ಸ್ವಾಮಿಯ ದೇವಾಲಯವು ಸುಂದರ ರೂಪದಲ್ಲಿದೆ. ಈ ದೇವಾಲಯದಲ್ಲಿ ಸಿದ್ಧೇಶ್ವರ ಸ್ವಾಮಿಯನ್ನು ಲಿಂಗರೂಪದಲ್ಲದೇ ಉದ್ಭವ ಮೂರ್ತಿಯು ಅರ್ಜುನನಿಗೆ ಈಶ್ವರನು ಪಾಶುಪತಾಸ್ತ್ರ ಕೊಡುವ ಆಕಾರದಲ್ಲಿದೆ. ಉದ್ಭವ ಮೂರ್ತಿಯ ಹಣೆಯ ಮೇಲೆ ಜಿನುಗುವ ರೂಪದಲ್ಲಿ ಪ್ರತಿವರ್ಷವೂ ವಿಶೇಷವಾಗಿ ಪ್ರತಿನಿತ್ಯವೂ ನೋಡಬಹುದು.

ಪ್ರತಿವರ್ಷವೂ ಈ ದೇವಾಲಯದ ಉತ್ಸವ ಮೂರ್ತಿಯು ಅಮಾವಾಸ್ಯೆಯಂದು ರಾವಣೋತ್ಸವ ಬಲಿಪಾಡ್ಯಮಿ ಚಂದ್ರ ಮಂಡಲ ರಥೋತ್ಸವವು ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಈ ಎಲ್ಲಾ ದೇವಾಲಯಗಳ ಈಗಿನ ಸುಂದರ ರೂಪಕ್ಕೆ ಹಾಸನದ ಪಟೇಲ್ ವಂಶಸ್ಥರು ಸೇವೆ ಸಲ್ಲಿಸುತ್ತಾ ಇರುತ್ತಾರೆ.

## ಹಾಸನಾಂಬೆಯ ನೆಲೆ-ಹಿನ್ನೆಲೆ

ಪಕೃತಿಯ ವರ ಪಡೆದು, ಸಂಸ್ಕೃತಿಯ ಸಾರವುಂಡು, ಧೀರೋದಾತ್ತ ಗುಣವನ್ನು ಮೆರೆಸಿ, ಸರ್ವಮತ ಸಮನ್ವಯ ತತ್ವವನ್ನು ಅನುಷ್ಠಾನದಲ್ಲಿ ತಂದು ಕೊಂಡು ನಾಡಿಗೇ ಮಾದರಿಯಾದ ಚಕ್ರಾಧಿಪತ್ಯವನ್ನು ಭರಿಸಿ ಮೆರೆದ ಪುಣ್ಯಭೂಮಿ ಹಾಸನ ಜಿಲ್ಲೆ. ಈ ಹಾಸನ ಜಿಲ್ಲೆಯ ಆಡಳಿತದ ಕೇಂದ್ರ ನಗರ ಹಾಸನ. ಈ ಹಾಸನದ ಅಭಿಮಾನದ ಅನುಪಮ ಪ್ರಭಾವದ ಶಕ್ತಿ ದೇವತೆ, ಗ್ರಾಮ ದೇವತೆ ಶ್ರೀ ಹಾಸನಾಂಬೆ. ಈಕೆಯನ್ನೇ ಹಾಸನಮ್ಮ ಹಾಸನದಮ್ಮ ಸಪ್ತಮಾತೃಕೆಯರೆಂದು ಅನನ್ಯ ಭಕ್ತಿಯಿಂದ ಆರಾಧಿಸುವುದು ಪರಿಪಾಠವಾಗಿದೆ.

ಅಮ್ಮ ಎನ್ನುವ ಮಾತು ಮನುಷ್ಯನ ಬಾಯಿಂದ ಮೊದಲು ಬಂದ ಮಾತು. ಅದಕ್ಕಾಗಿ ಮಾತೃದೇವೋ ಭವ ಎಂದರು ನಮ್ಮ ಹಿರಿಯರು. ಅಮ್ಮ ನಮ್ಮ ಇರುವಿಗೆ ಕಾರಣವಾಗಿ ನಮ್ಮ ನೆಮ್ಮದಿಗೆ ನೆರವಾಗುವ ತಾಯಿ ಎಂದೂ ಇದರ ಅರ್ಥ. ಮೂರ್ತಿ ಕಲ್ಪನೆ ಒದಗಿದ ಕಾಲದಲ್ಲಿ ಪುರಾಣ ಮೈದಳೆದ ಕಾಲದಲ್ಲಿ ಈ ಅಮ್ಮನ ಎರಡೂ ಮುಖಗಳಿಗೆ ರೂಪ ಸಿದ್ಧವಾಯಿತು. ಶಕ್ತಿ ಹಲವಾರು ವಿವರಗಳನ್ನು ಸೂಚಿಸುವಂತೆ ಹತ್ತಾರು ಕೈಗಳು, ಕಪಾಲ, ಶೂಲ, ಖಡ್ಗ, ಅಂಕುಶಗಳೂ ಬಂದವು. ವರದ, ಅಭಯ ಪುಷ್ಪ, ಅನ್ನಪಾತ್ರೆಗಳೂ ಬಂದವು.

ಮುಖದಲ್ಲಿ ಮಂದಹಾಸವು ಮೂಡಿತು. ಉರಿನಾಲಿಗೆ, ಕೋರೆದವಡೆಗಳೂ ಕೆಂಗಣ್ಣುಗಳೂ ಕಾಣಿಸಿಕೊಂಡವು. ಸುಖಾಸನದಲ್ಲಿ ಅನ್ನಪೂರ್ಣೆಯಾಗಿ ರಾಜರಾಜೇಶ್ವರಿಯಾಗಿ ಕೂತವಳೂ ಅವಳೇ. ಸಿಟ್ಟಿನಿಂದ ಶಿವನ ಮೈಮೇಲೆ ಕುಣಿಯುತ್ತಾ, ಬೆತ್ತಲೆಯಾಗಿ ಅಟ್ಟಹಾಸದಿಂದ ಕತ್ತಿಹಿಡಿದು ನಿಂತವಳೂ ಅವಳೇ. ಸಿಂಹದ ಮೇಲೇರಿ ಅಸುರರನ್ನು ಕೊಲ್ಲುತ್ತಾ ಉಗ್ರವಾಗಿಯೂ ಸೌಮ್ಯವಾಗಿಯೂ ತೋರಿಕೊಂಡವಳೂ ಅವಳೇ. ತನ್ನ ತಲೆಯನ್ನೇ ಕಡಿದುಕೊಂಡು ಕುತ್ತಿಗೆಯಿಂದ ಚಿಮ್ಮುವ ರಕ್ತವನ್ನು ಡಾಕಿನಿಯರಿಗೆ ಕುಡಿಸುತ್ತಿರುವ ಛಿನ್ನ ಮಸ್ತಾದೇವಿಯೂ ಅವಳೇ.

ಅವಳು ಮಾತೃಸ್ವರೂಪಿಣಿ, ತಾರಿಣಿ, ಸಂಹಾರಣಿ, ಇವೆಲ್ಲ ಶಕ್ತಿಯ ಬೇರೆ ಬೇರೆ ವಿವರಗಳೇ. ಬಿಳಿ ಬಣ್ಣದ ಗೌರಿಯಾಗಲೀ, ಕಾಡುಕಪ್ಪಿನ ಕಾಳಿಯಾಗಲೀ, ಚೆಲುವೆಯಾದ ಮೋಹಿನಿಯಾಗಲೀ, ಬೆದರಿಸುವ ಪ್ರತ್ಯಂಗಿರೆಯಾಗಲೀ, ಕರುಳನ್ನೇ ಕುಯ್ಯುವ ಕಂಕಾಳಿಯಾಗಲೀ ಹಿರಿಹಿಗ್ಗಿಸುವ ಲಲಿತೆಯಾಗಲೀ ಬಡಿದು ಬಗ್ಗಿಸುವ ಚಾಮುಂಡಿಯಾಗಲೀ, ಆ ಶಕ್ತಿಯೆದುರು ನಿಂತು ಸೆಣಸಿ ಗೆಲ್ಲಬಲ್ಲ ಗಂಡುತನ ಮನುಷ್ಯನಿಗೆ ಕಾಣಲಿಲ್ಲ.

ಶ್ರವಣ ಸಂಪ್ರದಾಯದ ಪ್ರಭಾವದಿಂದ ಸನ್ಯಾಸಿನಿಯ ಮನೋ ವೃತ್ತಿ ಬಲಗೊಂಡಾಗ ಹೆಣ್ಣು, ಹೊನ್ನು, ಮಣ್ಣು ಈ ಮೂರನ್ನು ಬಿಟ್ಟುಬಿಡಬೇಕು. ಎನ್ನುವ ಉಪದೇಶ ಸಿದ್ಧವಾಯಿತು ಬಿಟ್ಟವರು ಯಾರೋ ದೇವರೇ ಬಲ್ಲ.

ಹೆಣ್ಣಿನಿಂದಲೇ ಇಹವು, ಹೆಣ್ಣಿನಿಂದಲೇ ತರವು, ಹೆಣ್ಣಿನಿಂದಲೇ ಸಂಪದವು. ಹೆಣ್ಣನ್ನೊಲ್ಲದ ಅಣ್ಣಗಳಾರು? ಸರ್ವಜ್ಞನ ಪ್ರಶ್ನೆಗೆ ಉತ್ತರಿಸುವರಾರು?

ದೇವಿಯ ಆರಾಧನೆ ನಡೆಯುವ ಕೆಲವು ಪ್ರಸಿದ್ಧ ಸ್ಥಳಗಳು, ಕಾಂಚಿಪುರ (ಕಂಚಿ ಕಾಮಕ್ಷಿ), ಕಾಶಿ (ವಿಶಾಲಕ್ಷಿ), ಮಧುರೆ (ಮೀನಾಕ್ಷಿ), ತುಳಾಜಾಪುರ (ಭವಾನಿ), ಶೃಂಗೇರಿ (ಶಾರದೆ), ಮಂಗಳೂರು (ಮಂಗಳಾದೇವಿ), ಕೊಲ್ಲುರು (ಮೂಕಾಂಬಿಕೆ), ಉತ್ತರ ಕರ್ನಾಟಕದ ಸವದತ್ತಿ (ಎಲ್ಲಮ್ಮ), ಕೇರಳದ (ಭಗವತಿ), ಬಂಗಾಳದ (ದುರ್ಗೆ), ಹಾಸನದ (ಹಾಸನಾಂಬೆ).

ಹಿಂದೂ ದೇವಗಣದಲ್ಲಿ ಸಪ್ತ ಮಾತೃಕೆಯರಿಗೊಂದು ವಿಶಿಷ್ಟ ಸ್ಥಾನವಿದೆ. ಭಾರತದಾದ್ಯಂತ ಕಂಡುಬರುವ ಸಪ್ತಮಾತೃಕೆಯರ ಅಸಂಖ್ಯಾತ ಶಿಲ್ಪಗಳು ಈ ದೇವತೆಗಳ ಆರಾಧನೆಯ ಜನಪ್ರಿಯತೆಗೆ ದೀಕ್ಷೆ. ಸಂಸ್ಕೃತ ಶ್ಲೋಕವೊಂದು ಸಪ್ತಮಾತೃಕೆಯರನ್ನು ಈ ರೀತಿ ಮಾಡುತ್ತದೆ.

**ಬ್ರಾಹ್ಮಿ ಮಾಹೇಶ್ವರಿ ಚೈವ**
**ಕೌಮಾರಿ ವೈಷ್ಣವೀ ತಥಾ**
**ಮಾಹೇಂದ್ರಿ ಚೈವ ವಾರಾಹೀ**
**ಚಾಮುಂಡಾ ಸಪ್ತ ಮಾತರಃ**

ಶಿಲ್ಪದಲ್ಲಿ ಸಪ್ತ ಮಾತೃಕೆಯರನ್ನು ಒಂದೇ ಫಲದಲ್ಲಿ ಸಾಲಾಗಿ ಅಥವಾ ಏಳು ಬೇರೆ ಬೇರೆ ಮೂರ್ತಿಗಳಾಗಿ ಕಡೆದಿಡುವುದು ವಾಡಿಕೆ. ಆಗ ಅವರ ಕ್ರಮ ಸಾಮಾನ್ಯವಾಗಿ ಬ್ರಾಹ್ಮೀ, ಮಾಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ (ಮಾಹೇಂದ್ರಿ) ಹಾಗೂ ಚಾಮುಂಡಿ. ಬ್ರಾಹ್ಮಿಯ ಬಲಭಾಗದಲ್ಲಿ ವೀರಭದ್ರನನ್ನೂ ಚಾಮುಂಡಿಯ ಎಡಭಾಗದಲ್ಲಿ ಗಣೇಶನನ್ನೂ ಇರಿಸಿ ನಡುವೆ ಮಾತೃಗಣಗಳನ್ನಾರಿಸಬೇಕೆಂದು ವಿಧಿಯಿದೆ. ದೇವತೆಗಳ ಶಕ್ತಿಯರಾದ ಇವರು ಸಂಬಂಧಪಟ್ಟ ಪುರುಷ ದೇವತೆಗಳಂತೆಯೇ ಆಯುಧ, ಆಭರಣ, ವಾಹನ ಹಾಗೂ ಸಂಕೇತಗಳನ್ನು ಹೊಂದಿರುವುದು ಪದ್ಧತಿ. ಬ್ರಾಹ್ಮೀಯು ಬ್ರಹ್ಮನಂತೆ, ಮಹೇಶ್ವರಿ ಶಿವನಂತೆ, ಕೌಮಾರಿ ಸ್ಕಂದನಂತೆ ಇತ್ಯಾದಿ. ಹೊಯ್ಸಳರ ಕಾಲದ ಸಪ್ತಮಾತೃಕೆಯರ ವಿಗ್ರಹಗಳು ಮೈತುಂಬ ಆಭರಣಗಳೂ, ಸುಂದರವಾದ ಕಿರೀಟ ಮಂದಹಾಸ ಪೂರ್ಣಮುಖ ಮುದ್ರೆಗಳಿಂದ ತುಂಬಾ ಆಕರ್ಷಣೀಯವಾದವು. ಈ ಪೈಕಿ ಹಾಸನದ ಸಮೀಪ ಇರುವ ಕೋರಮಂಗಲ, ಬೇಲೂರು, ಹಳೇಬೀಡು, ನುಗ್ಗೇಹಳ್ಳಿಗಳಲ್ಲಿ ಕಂಡುಬರುವ

ಸಪ್ತಮಾತೃಕೆಯರ ಶಿಲ್ಪಗಳು ವಿಶೇಷವಾಗಿ ಹೆಸರಿಸುವಂಥವು. ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ದಕ್ಷಿಣ ಮಹದ್ವಾರದ ಮಾತೃಕೆಯರ ಶಿಲ್ಪಗಳಂತೂ ಅತ್ಯಂತ ಸುಂದರವಾದವು.

ಶೈವ ದೇವಾಲಯಗಳಲ್ಲಿ ಸಪ್ತ ಮಾತೃಕೆಯರು ಮಗುವನ್ನು ಹಿಡಿದು ಕೊಂಡಿರುವಂತೆ ಚಿತ್ರಿಸಲಾಗಿರುವುದು ಗಮನಾರ್ಹ. ಇದು ಮಾತೃತ್ವದ ಸಂಕೇತ. ಮಗುವನ್ನು ಹಿಡಿದುಕೊಂಡ ಸಪ್ತ ಮಾತೃಕೆಯರ ವಿಗ್ರಹಗಳು ಎಲ್ಲೋರದ ಗುಹಾಂತರ ದೇವಾಲಯಗಳಲ್ಲೂ ಕಂಡುಬಂದಿದೆ. ವಿಜಯನಗರದ ಸಾಮ್ರಾಜ್ಯ ಸ್ಥಾಪನೆಗೆ ಕಾರಣರಾದವರೆನ್ನಲಾದ ವಿದ್ಯಾರಣ್ಯರ ಪಾದಸ್ಪರ್ಶದಿಂದ ಪವಿತ್ರವನ್ನಾಗಿರಿಸಿದ ತಾಲ್ಲೂಕು ಹಾಸನ. ಹೊಯ್ಸಳರ ಕಾಲದ ವಿರೂಪಾಕ್ಷೇಶ್ವರ ದೇವಾಲಯವನ್ನೂ ಹಾಸನದಲ್ಲಿ ವಿದ್ಯಾರಣ್ಯರು ಜೀರ್ಣೋದ್ಧಾರ ಮಾಡಿದರೆಂದು ಪ್ರತೀತಿ. ಹಾಸನಾಂಬೆ ಹೆಸರು ಸಿಂಹಾಸನಪುರ ಎಂಬ ಹೆಸರಿನಿಂದ ಬಂದಿದೆ. ಎಂದು ತಿಳಿಯಲಾಗಿದೆ. ಸಿಂಹಾಸನಪುರಿ ಅರ್ಜುನನ ಮೊಮ್ಮಗ ಜನಮೇಜಯ ಮಹಾರಾಜನ ಸ್ಥಳವಾಗಿತ್ತೆಂದೂ ಹೇಳುತ್ತಾರೆ.

ಇನ್ನೊಂದು ಕಥೆಯ ಪ್ರಕಾರ ಸಪ್ತ ಮಾತೃಕೆಯರು ವಾರಣಾಸಿಯಿಂದ ದಕ್ಷಿಣಭಾರತದತ್ತ ಬರುತ್ತಿರುವಾಗ ಈ ಪ್ರದೇಶದ ಪ್ರಕೃತಿ ಸೌಂದರ್ಯಕ್ಕೆ ಮನಸೋತು ಇಲ್ಲೇ ನೆಲೆಸಲು ನಿರ್ಧರಿಸಿ ಅವರಲ್ಲಿ ಆರುಮಂದಿ ಹಾಸನದಲ್ಲಿಯೂ ಮತ್ತೊಬ್ಬಾಕೆ ಕೆಂಚಾಂಬದೇವಿ ಎಂಬ ಹೆಸರಿನಿಂದ ಕೆಂಚಮ್ಮನ ಹೊಸಕೋಟೆ ಎಂಬಲ್ಲಿ ನೆಲೆಗೊಂಡಳೆಂದೂ ಹೇಳಲಾಗಿದೆ.

ಹಾಸನಮ್ಮ ಎಂದರೆ ನಸುನಗುವ ತಾಯಿ ಎಂದರ್ಥದಲ್ಲಿ ಹಾಸನಾಂಬ ಹೆಸರು ಬಂದಿರಬೇಕು. ಹಾಸನಾಂಬ ಮೂರ್ತಿ ಹುತ್ತದ ಆಕಾರದಲ್ಲಿರುವುದು ವೈಶಿಷ್ಟ್ಯ. ಈಕೆಯ ದರ್ಶನ ವರ್ಷದಲ್ಲಿ ಒಂದು ಸಾರಿ ಅದೂ ಅಶ್ವಯುಜ ಮಾಸದ ಶುಕ್ಲಮಾಸದಲ್ಲಿ ಎನ್ನುವುದು ಮಹಾ ರಹಸ್ಯ ಒಡೆಯಲಾರದ ಒಗಟಾಗಿದೆ.

ಐತಿಹಾಸಿಕವಾಗಿ ಈ ತಾಲ್ಲೂಕನ್ನು ಚೋಳರ ಅರಸರ ಅಧಿಪತಿಯಾದ ಬುಕ್ಕನಾಯಕ ಮತ್ತು ಅವನ ವಂಶಸ್ಥರು ಕ್ರಿ.ಶ. ಸುಮಾರು 11 ನೆಯ ಶತಮಾನದಿಂದ ಒಂದು ಶತಮಾನಕ್ಕೂ ಹೆಚ್ಚುಕಾಲ ಆಳಿದರು ಎಂದು ತಿಳಿದು ಬರುತ್ತದೆ. ಹೊಯ್ಸಳರಿಗೂ ಪೂರ್ವಕಾಲದಲ್ಲಿ ಇದು ಗಂಗರ ಆಡಳಿತಕ್ಕೊಳಪಟ್ಟಿತ್ತು. 11 ನೆಯ ಶತಮಾನದಲ್ಲಿ ಬುಕ್ಕನಾಯಕ ತನ್ನ ವಿಜಯೋತ್ಸವ ನೆನಪಿಗಾಗಿ ಒಂದು ಕೋಟೆಯನ್ನು ಕಟ್ಟಿ ಆ ಸ್ಥಳಕ್ಕೆ ಚನ್ನಪಟ್ಟಣ (ಹವನಾದ ಊರು) ಎಂದರೆ ಚೆಲುವಾದ ಪಟ್ಟಣ ಎಂಬ ಹೆಸರಿಟ್ಟನಂತೆ. ಬುಕ್ಕನಾಯಕನ ವಂಶಸ್ಥರು ನಂತರ ಈ ಪಟ್ಟಣ ಸಂಜೀವ ಕೃಷ್ಣಪ್ಪನಾಯಕನೆಂಬುವನಿಗೆ ಸೇರಿತು ಎಂಬುದಾಗಿ ತಿಳಿದು ಬರುತ್ತದೆ.

ಈ ನಾಯಕ ಒಮ್ಮೆ ಪ್ರಯಾಣ ಹೊರಟಾಗ ಒಂದು ಮೊಲ ಅಡ್ಡಬಂದು ಪಟ್ಟಣದ ಒಳಕ್ಕೆ ಪ್ರವೇಶಿಸಿತೆಂದೂ ಈ ಅಪಶಕುನದಿಂದ ನಾಯಕ ನೊಂದುಕೊಂಡನಂತೆ ಆಗ ಅವನಿಗೆ ಹಾಸನಾಂಬ ಪ್ರತ್ಯಕ್ಷಳಾಗಿ ಮಗು ಖಿನ್ನ ಮನಸ್ಸು ತೊರೆದು ಈ ಸ್ಥಳದಲ್ಲಿ ಒಂದು ಕೋಟೆಯನ್ನು ಕಟ್ಟು ಎಂದು ಹೇಳಿದಳಂತೆ ಅದೇ ಪ್ರಕಾರ ನಾಯಕನು ಕೋಟೆಯನ್ನು ಕಟ್ಟಿ ಅದಕ್ಕೆ ಹಾಸನಾಂಬ ಹೆಸರಿಟ್ಟನೆಂದು ಪ್ರತೀತಿ.

ಹಾಸನವೆಂಬ ಉಲ್ಲೇಖ ಹಾಸನ ತಾಲ್ಲೂಕಿನ ಕುದುರೆಗುಂಡಿ ಎಂಬ ಗ್ರಾಮದಲ್ಲಿರುವ ಕ್ರಿ.ಶ. 1140 ರಲ್ಲಿ ಸ್ಥಾಪಿತವಾದ ವೀರಗಲ್ಲಿನ ಶೀಲಾ ಶಾಸನದಲ್ಲಿ ತಿಳಿದುಬರುತ್ತದೆ.

ದೀಪಾವಳಿ ಬೆಳಕಿನ ಹಬ್ಬದ ದೀಪಾವಳಿಯ ಹಿನ್ನೆಲೆಯಲ್ಲಿ ಸಪ್ತಮಾತೃಕೆಯರ ಹುಟ್ಟಿನಗುಟ್ಟು ಇದೆ. ಬ್ರಹ್ಮನ ವರದಿಂದ ಉನ್ಮತ್ತನಾದ ಅಂಧಕಾಸುರನು ದೇವತೆಗಳ ಪ್ರಾರ್ಥನೆಯನ್ನು ಮನ್ನಿಸಿದ ಶಿವ ಅಂಧಕಾಸುರನ ವಧೆಗೆ ಸಿದ್ಧವಾಗುತ್ತಾನೆ. ನೆಲಕ್ಕೆ ಬೀಳುವ ಅಂಧಕಾಸುರನ ರಕ್ತದ ಪ್ರತಿಹನಿಯಿಂದಲೂ ಇನ್ನೊಬ್ಬ ಅಂಧಕಾಸುರನು ಹುಟ್ಟುತ್ತಿರಲು ಅವನ ರಕ್ತ ನೆಲಕ್ಕೆ ಬೀಳುವುದನ್ನು ತಡೆಯುವ ಸಲುವಾಗಿ ತನ್ನ ಬಾಯಿಯಿಂದ ಶಿವನು ಒಬ್ಬ ಶಕ್ತಿಯನ್ನು (ಯೋಗೇಶ್ವರಿ) ಸೃಷ್ಟಿಸಿದ. ಇತರ ದೇವತೆಗಳೂ ಶಿವನ ಸಹಾಯಕ್ಕೆ ತಮ್ಮ ಶಕ್ತಿಯನ್ನು ಕಳುಹಿಸಿದರು. ಹೀಗೆ ಜನ್ಮ ತಾಳಿದವರೇ ಸಪ್ತ ಮಾತೃಕೆಯರು.

ಅರವತ್ತನಾಲ್ಕು ಕಲೆಗಳಿಗೆ ಅಧೀದೇವತೆಗಳಿಂದ ಸಪ್ತಮಾತೃಕೆಯರು ಶ್ರೀ ಹಾಸನಾಂಬೆಯ ನಾನಾ ರೂಪಗಳಲ್ಲಿ ನಾನಾ ಆಕಾರಗಳಲ್ಲಿ ನಾನಾ ವರ್ಣಗಳಲ್ಲಿ ನೆನೆದವರ ಮನದಲ್ಲಿ ಬೇಡಿದವರ ಕರದಲ್ಲಿ ಪೂಜಿಸುವವರ ಬದುಕಿನಲ್ಲಿ ಉದ್ದಕ್ಕೂ ನೆಲೆಸಿ ಹರಸಿ, ಹರುಷ ನೀಡಲೆಂದು ಪ್ರಾರ್ಥಿಸೋಣ.

ಸರ್ವಮಂಗಳ ಮಾಂಗಲ್ಯೆ ಶಿವೆ ಸರ್ವಾರ್ಥ ಸಾಧಿಕೆ. ಶರಣ್ಯೆ ತ್ರ್ಯಯಂಬಿಕೆ ದೇವಿ ನಾರಾಯಣಿ ನಮೋಸ್ತುತೆ.

ಜಯತು ಶ್ರೀ ಹಾಸನಾಂಬ.

**ಮುಂದಿನ ವರ್ಷದ ದರ್ಶನಾರಂಭದ ದಿನಗಳು : ದಿನಾಂಕ 01-11-2012 ರಿಂದ 15-11-2012ರವರೆಗೆ**

ವಿಚಾರ ಸಂಗ್ರಹಣೆ ಕೃಪೆ :

**ಶ್ರೀ ಬೈರೋಜಿರಾವ್,**

ನಿವೃತ್ತ ರಾಜಸ್ವ ನಿರೀಕ್ಷಕರು, ಜಿಲ್ಲಾಧಿಕಾರಿಗಳ ಕಛೇರಿ, ಹಾಸನ :: ಫೋನ್ : (ಮನೆ) 08172 - 267504

ಶ್ರೀ ಪವನ್‌ಕುಮಾರ್ ಚವಾನ್, ಶ್ರೀ ಗಗನ್ ಕುಮಾರ್ ಚವಾನ್, ಕುಮಾರಿ ತನುಶ್ರೀ, ಶ್ರೀ ಮಹಾದೇವರಾವ್ ಚವಾನ್

website : http : //hassan.nic.in